(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದು ಅದು ನಮ್ಮ ಹಕ್ಕು. ನಾನು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರ ಕೊಡಲಿಲ್ಲವೆಂದರೆ, ನನ್ನ ಪ್ರಜಾಪ್ರಭುತ್ವದ ಮಹತ್ವದಲ್ಲಿ ನಾನು ಸಭಾತ್ಯಾಗ ಮಾಡಿ ಘೇರಾವೋ ಮಾಡುತ್ತೇನೆ. ಅದಕ್ಕೆ ನೀವು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ? ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಸಭಾ ತ್ಯಾಗ ಮಾಡುವುದು ನನ್ನ ಹಕ್ಕು. ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಗೆ ಆಗಮಿಸಿ ಧರಣಿ ಕುಳಿತರು).

SRI H. N. NANJE GOWDA :- Point of order.

Mr. SPEAKER :- He is on a point of order.

SRI H. N. NANJE GOWDA :- Sir, the business of the House should be conducted as per rules. ನಿನ್ನೆ ಸದನ ಮುಗಿದು ಇವತ್ತು ಸದನ ಸೇರುವುದರೊಳಗೆ ಏನಾದರೂ ಆಗಬಾರದ ಅನಾಹುತವಾದರೆ ಅಂತಹ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಹುದು ಎಂದು ತಾವು ಆಪ್ಷನ್ ಕೊಡಿಸಿದಿರಿ. 10 ವರ್ಷಗಳ ಹಿಂದೆ ನಾನು ಲೋಕಸಭೆಯಲ್ಲಿ ನೋಡಿದ್ದೇನೆ. zero hour ನೀವು ಹೇಳಿದ್ದುದು ಸರಿ. ಈ ಎಲ್ಲಾ ವಿಚಾರಗಳನ್ನು ಇಲ್ಲಿ ಮಾತನಾಡಿದರೆ ಇದು ಹಳ್ಳಿಯ ಪಂಚಾಯತಿ ಕಟ್ಟೆ ಆದ ಹಾಗೆ ಆಗುತ್ತದೆ. We cannot convert this House into a village panahayat meeting. This is an August House. We have to maintian the dignity and decorem of the House. ಏನೇನು ಚರ್ಚೆ ಮಾಡುತ್ತಾರೆಂದು ಬೇರೆಯವರು ವಾಚ್ ಮಾಡುತ್ತಿರುತ್ತಾರೆ. ಇಲ್ಲಿ ಮನಸ್ಸಿಗೆ ಬಂದಿದ್ದೆಲ್ಲಾ ಚರ್ಚೆ ಮಾಡುತ್ತೇನೆಂದರೆ ಹೇಗೆ? ಹಿಂದುಗಡೆಯಲ್ಲಿ ಕುಳಿತಿರುವವರು ಏನಾಗಬೇಕು?

MR. SPEAKER :- That is exactly my problem. ಇಬ್ಬರು ಧಾರವಾಡ ಜಿಲ್ಲೆಯಲ್ಲಿ ಸದಸ್ಯರು ಆವರ ಆಸ್ಪತ್ರೆಗೆ ಸಂಬಂಧಿಸಿದಂತೆ ಮಾತನಾಡುವುದಕ್ಕೆ 5 ದಿವಸದಿಂದ ಟೈಮ್ ಕೇಳುತ್ತಿದ್ದಾರೆ. ಶೂನ್ಯ ವೇಳೆಯಲ್ಲಿನ ಪ್ರಸ್ತಾಪ ಒಂದರಿಂದ ಒಂದೂಕಾಲು ಗಂಟೆಯೊಳಗೆ ಮುಗಿಯದೆ ಹೋದರೆ ನಾನು ಇತರೇ ವಿಷಯಗಳನ್ನು ಮುಗಿಸುವುದು ಹೇಗೆ? ಈ ರೀತಿ ಆಗತ್ತಿರುವುದರಿಂದ ಆಸ್ಪತ್ರೆಯ ವಿಷಯ ಮಾತನಾಡುವುದಕ್ಕೆ ಸದಸ್ಯರಿಗೆ ಆಗುತ್ತಿಲ್ಲ. ಅಲ್ಲಿ ಯಾರೋ ಸತ್ತಿದ್ದರೂ ಕೂಡ ಪ್ರಸ್ತಾಪ ಮಾಡುವ ಹಾಗಿಲ್ಲ.

+ **ಶ್ರೀ ಬಿ. ಬಿ. ಶಿವಪ್ಪ** (ಸಕಲೇಶಪುರ) :- ಮಾನ್ಯ ಸಭಾಧ್ಯಕ್ಷರೆ, ನಾವು ರಾಜಕೀಯದಲ್ಲಿ ಹಲವು ವರ್ಷದಿಂದ ಇರಬಹುದು. ಆದರೆ ಸದನಕ್ಕೆ ಇದು ಮೊದಲನೆಯ ಸಲ ಪ್ರವೇಶ ಮಾಡಿರುವುದು. ಅಧ್ಯಕ್ಷರು ಏನು ಅನುಮತಿ ಕೊಡುತ್ತಾರೆ, ಮತ್ತು ನಾವು ಈ ಸದನಕ್ಕೆ ಪ್ರವೇಶ ಮಾಡುವಾಗ ನಮಗೆ ಇಲ್ಲಿ ಏನೊಂದು ಪುಸ್ತಕವನ್ನು ಕೊಟ್ಟಿದ್ದೀರಿ ಅದರ ಪ್ರಕಾರ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿ